ಜೀವನ ಮಾಡೋ ಧೈರ್ಯ, ಆತ್ಮವಿಶ್ವಾಸ ಇಲ್ಲದ ನಿಮಗೆ ಹೊಸ ಜೀವನ ಡಾಟ್ ಕಾಮ್ ನಡೆಸುವ ಅರ್ಹತೇನೇ ಇರೋದಿಲ್ಲ. ಜೀವನ ಪ್ರೀತಿ, ಆಶಾವಾದದಂಥ ಮಾತುಗಳು ಕೇವಲ ಬ್ಲಾಗುಗಳಲ್ಲಲ್ಲ, ಬದುಕಿನಲ್ಲೂ ಇರಬೇಕು. ಅದು ಬಿಟ್ಟೂ..." ಎಂದ.

"ಇಲ್ಲ ಸಾರಿ. ನಾನು ಹುಟ್ಟುಹಾಕಿರುವ ಈ ಸಂಸ್ಥೆ ಈಗ ತುಂಬಾ ದೊಡ್ಡದಾಗಿ ಬೆಳೆದು ಬಿಟ್ಟಿದೆ. ದೇಶದಾದ್ಯಂತ ಹನ್ನೆರಡು ಬ್ರಾಂಚುಗಳಿವೆ. ಇಲ್ಲಿಯ ಆಫೀಸಿನ ಕೇಂದ್ರದಿಂದ ಎಲ್ಲವನ್ನೂ ನಿರ್ವಹಿಸುತ್ತಿದ್ದೇನೆ. ಈಗಿದನ್ನು ಬಿಟ್ಟು ಬಂದರೆ ನನ್ನ ಉದ್ಯೋಗಿಗಳೆಲ್ಲ ಅತಂತ್ರರಾಗ್ತಾರೆ" ಎಂದೆ.

ದೊಡ್ಡದಾಗಿ ನಗುತ್ತಾ "ನೋಡಿ ಮಿಸ್ ಮಧುಮಿತಾ, ನೋ ಮ್ಯಾನ್ ಈಸ್ ಇನ್‌ಡಿಸ್‌ಪೆನ್ಸಿಬಲ್. ಯಾರೂ ಯಾರಿಗೂ ಯಾವ ಕಾರಣಕ್ಕೂ ಅನಿವಾರ್ಯವಲ್ಲ. ನಮ್ಮಿಂದಲೇ ಎಲ್ಲಾ ನಡೆಯುತ್ತೆ ಅಂದುಕೊಳ್ಳೋದು ಒಂದು ಥರಾ ಅಹಂಕಾರ. ನೀವು ಬಿಟ್ಟು ಹೋದ ಮೇಲೂ ಎಲ್ಲವೂ ಎಂದಿನಂತೆ ನಡೆಯುತ್ತೆ. ನಿಮ್ಮ ಕೈಕೆಳಗೆ ತಯಾರಾದವರೆಲ್ಲ ಅಷ್ಟೇ ಎಫಿಶಿಯಂಟಾಗಿರ್ತಾರೆ. ನಿಮ್ಮಿಂದಲೇ ಎಲ್ಲಾ ಅನ್ನೋದನ್ನು ಮೊದಲು ಬಿಟ್ಟುಬಿಡಿ" ಎಂದ.

"ಅದೇನೋ ಸರಿ. ನಾನು ಟೆಕ್ನಿಕಲಿ ಕ್ವಾಲಿಫೈಡ್ ಅಲ್ಲ. ಅಮೆರಿಕಕ್ಕೆ ಬಂದರೆ ನನ್ನ ಕರಿಯರ್‍ರು?" ಎಂದೆ.

"ಒಂದು ಕೆಲಸ ಮಾಡಿ, ಅಮೆರಿಕದಲ್ಲಿ ವಿಚ್ಛೇದನದ ಅನುಪಾತ ಇಲ್ಲಿಗಿಂತ ಹೆಚ್ಚಾಗಿದೆ. ಅಲ್ಲೂ ಒಂದು ರೀ ಮ್ಯಾರೇಜ್ ಡಾಟ್ ಕಾಮ್ ಶುರು ಮಾಡಿ" ಎಂದ ಕಣ್ಣು ಮಿಟುಕಿಸುತ್ತಾ.

"ಅದೇನೋ ಸರಿ. ಇದಕ್ಕೆ ನನ್ನ ತಾಯಿ ಅಣ್ಣ ಎಲ್ಲ ಒಪ್ಪಬೇಕಲ್ಲ" ಎಂದೆ.

"ಅವರೆಲ್ಲರನ್ನೂ ನಾನಾಗಲೇ ಸಂಪರ್ಕಿಸಿದ್ದೇರಿ. ಎಲ್ಲರಿಗೂ ನಾನಿಷ್ಟವಾಗಿದ್ದೀನಿ. ನೀವು ಬಡಪೆಟ್ಟಿಗೆ ಒಪ್ಪುವುದಿಲ್ಲ, ಹೇಗಾದರೂ ಅವಳನ್ನು ಒಪ್ಪಿಸಿದರೆ ಸಂತೋಷವಾಗಿ ಮದುವೆ ಮಾಡುತ್ತೇವೆ ಅಂದ್ರು. ನಿಮ್ಮಮ್ಮ ಅಂತೂ ಅವಳಿಗೆ ಮರುಮದುವೆ ಮಾಡಿಸೋ ತಿಕ್ಕಲು ಹಿಡಿದಿದೆ. ಹೇಗಾದರೂ ಅದನ್ನು ಬಿಡಿಸಿ ಪುಣ್ಯಕಟ್ಕೋಪ್ಪ ಅಂದ್ರು" ಎಂದ ನಗುತ್ತಾ.

ಈಗಲೂ ನಗದಿರಲು ನನಗೆ ಸಾಧ್ಯವಾಗಲಿಲ್ಲ.


**ಉಷಾ ನರಸಿಂಹನ್**

ಕತೆಗಾರ್ತಿ ಉಷಾ ಮೈಸೂರಿನಲ್ಲಿ ನೆಲೆಸಿರುವ ಗೃಹಿಣಿ. ಅವರ ಎರಡು ಕಾದಂಬರಿಗಳು, ಎರಡು ಕಥಾಸಂಕಲನಗಳು, ಎರಡು ಕವನ ಸಂಕಲನಗಳು ಪ್ರಕಟವಾಗಿದೆ. 'ಮಯೂರ'ವೂ ಸೇರಿದಂತೆ ಕೆಲವು ಪತ್ರಿಕೆಗಳಲ್ಲಿ ಕತೆಗಳನ್ನು ಪ್ರಕಟಿಸಿದ್ದಾರೆ. 'ಪಯಣರಾಗ' ಎಂಬ ಭಾವಗೀತೆಗಳ ಧ್ವನಿ ಸುರಳಿಯನ್ನು ಹೊರತಂದಿದ್ದು, 'ಕದಳಿ ಕಲ್ಯಾಣ' ಎಂಬ ನಾಟಕವನ್ನೂ ಅವರು ಬರೆದಿದ್ದಾರೆ.